ಸೊಂಡೂರು ತಾಲ್ಲೂಕಿನ ಮಾದಪುರ ಗ್ರಾಮ ಪುನರ್ ವಸತಿ ಬಗ್ಗೆ.

೬೭೩. ಶ್ರೀ ಯಂ. ಭೂಪತಿ (ಸಂಡೂರು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೊಂಡೂರು ತಾಲ್ಲೂಕಿನ ಮಾದಪುರ ಗ್ರಾಮದ ಸುಮಾರು ೫೦೦ ಕುಟುಂಬಗಳು ಊರಿನಲ್ಲಿ ಬಸಿ ನೀರಿನ ಪ್ರಯುಕ್ತ ತೊಂದರೆಗೆ ಈಡಾಗಿದ್ದು ಪುನಃ ವಸತಿ ಕಲ್ಪಿಸಬೇಕೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಪುನಃ ವಸತಿಗಾಗಿ ಸರ್ಕಾರದವರು ಸ್ವಾಧೀನ ಪಡಿಸಿಕೊಂಡ ಸ್ಥಳ ಎಷ್ಟು ?

ಇ) ಪುನಃ ವಸತಿಗಾಗಿ ಮಾಡಿದ ಅಂದಾಜು ವೆಚ್ಚ ಎಷ್ಟು ?

ಈ) ಸದರಿ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಎಷ್ಟು ಕಾಲದಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ಬಂದಿದೆ.

ಆ) ೨೯ ಎಕರೆ ೩೧ ಗುಂಟೆಗಳು.

ಇ) ೧೯೮೪ನೇ ಸಾಲಿನ ದರಪಟ್ಟಿಯ ಮೇಲೆ ೩೬ ಲಕ್ಷ ರೂಪಾಯಿಗಳು.

ಈ) ಅಂದಾಜಿಗೆ ಸರ್ಕಾರದ ಆಡಳಿತ ಮಂಜೂರಾತಿ ನೀಡುವ ಪ್ರಸ್ತಾವ ಪರಿಶೀಲನೆಯಲ್ಲಿದೆ.

ಹಲ್ಲರ್ ಉಪಯೋಗಿಸುವ ರೈತರ ಮೇಲೆ ಮಾರಾಟ ತೆರಿಗೆ ಹಾಗೂ ನೋಂದಣಿ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ.

೬೭೦. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ತಮ್ಮ ಸ್ವಂತಕ್ಕಾಗಿ ಉಪಯೋಗಿಸುತ್ತಿರುವ ಳನೇ ಸಂಖ್ಯೆಯ ಹಲ್ಲರಿನ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಿರುವುದು ಮತ್ತು ಸದರಿ ಹಲ್ಲರನ್ನು ತೆರಿಗೆ ಇಲಾಖೆಯಲ್ಲಿ ನೋಂದಾಯಿಸಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ರೈತರು ತಮ್ಮ ಸ್ವಂತ ಭತ್ತವನ್ನು ಅಕ್ಕಿ ಮಾಡುವುದು ಳನೇ ಸಂಖ್ಯೆಯ ಹಲ್ಲರ್‌ನಲ್ಲಿ ಆದರೆ ಅವರನ್ನು ಅಕ್ಕಿ ಮಿಲ್ಲಿನವರಂತೆ ನೋಂದಣಿ ಮಾಡಲು ಆದೇಶಿಸುವುದು ಸರಿಯೇ ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವರೆ ?

ಶ್ರೀ ರಾಮಕೃಷ್ಣ ಹೆಗಡೆ (ವಾಣಿಜ್ಯ ಮಂತ್ರಿಗಳು).—

ಅ) ಭತ್ತವನ್ನು "ಮಿಲ್" ಮಾಡಿ ಅಕ್ಕಿ ತಯಾರಿಸುವ ಯಂತ್ರಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ಕರ್ನಾಟಕ ಮಾರಾಟ ತೆರಿಗೆ ಕಾನೂನಿನ ಅಧಿನಿಯಮ ೧೦ (೩) ರನ್ವಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಾಯಿಸಿ ಕೊಳ್ಳಬೇಕು. ಆದರೆ ಈ ರೀತಿ ನೋಂದಾಯಿಸಿಕೊಂಡ ವ್ಯಕ್ತಿಯು ಆತನ ವಹಿವಾಟು ವರ್ಷಕ್ಕೆ ರೂ. ೧ ಲಕ್ಷಗಳಿಗೆ ಮೇಲ್ಪಟ್ಟಲ್ಲಿ ಮಾತ್ರ ತೆರಿಗೆ ಪಾವತಿ ಮಾಡಲು ಬದ್ಧನಾಗುತ್ತಾನೆ.

ಆ) ಹೌದು. ಮಾರಾಟ ತೆರಿಗೆ ಕಾಯಿದೆಯ ಅಧಿನಿಯಮ ೧೦ (೩)ರಂತೆ ವ್ಯಾಪಾರಿಯಾಗಿರಲಿ ಅಥವಾ ಇಲ್ಲದಿರಲಿ, ಭತ್ತವನ್ನು ಅಕ್ಕಿಯನ್ನಾಗಿ ಪರಿವರ್ತಿಸುವ ಯಂತ್ರಗಳನ್ನು ಹೊಂದಿರುವ ಎಲ್ಲರೂ ನೋಂದಣಿಸಿಕೊಳ್ಳುವುದು ಕಡ್ಡಾಯವಾಗಿದೆ. ಇಲಾಖೆಯ ಅನುಭವದಲ್ಲಿ ಭತ್ತ ಮತ್ತು ಅಕ್ಕಿಯ ವ್ಯಾಪಾರದಲ್ಲಿ ತೆರಿಗೆ ತಪ್ಪಿಸಿ ಕೊಳ್ಳುವ ಪ್ರವೃತ್ತಿಯು ಕಂಡು ಬರುತ್ತಿರುತ್ತಿದ್ದುದರಿಂದ ಈ ನೋಂದಣಿಯನ್ನು ಕಡ್ಡಾಯ ಮಾಡುವುದು ಅಗತ್ಯವಾಯಿತು.

ಇ) ಇಂತಹ ರೈತರಿಗೆ ತೊಂದರೆಯಾಗದಂತೆ ಅಧಿನಿಯಮಗಳ ಅನುಸಾರವಾಗಿ ಕ್ರಮ ಕೈಗೊಳ್ಳಬೇಕೆಂದು ಎಲ್ಲಾ ಇಲಾಖಾ ಅಧೀನ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.